**ಅಸಲು ದಾವಾ ಸಂಖ್ಯೆ -29/2015 ಡಿ.ಡಬ್ಲ್ಯೂ:-2**

ದಿನಾಂಕಃ 17.03.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- 1 ನೇ ಪ್ರತಿವಾದಿ ಪರ ವಕೀಲರಿಂದ :-**

ನಮ್ಮ ಕುಟುಂಬದ ಮೂಲ ಪುರುಷ ಚನ್ನವೀರಪ್ಪಗೌಡ. ನಮ್ಮ ಅಜ್ಜ ಚನ್ನವೀರಪ್ಪಗೌಡರವರಿಗೆ 3 ಜನ ಹೆಂಡತಿಯರು ಅಂದರೆ ಹಾಲಮ್ಮ, ಹಿರಿಯಮ್ಮ ಮತ್ತು ಬಸಮ್ಮ ಎಂದರೆ ಸರಿ. ನನ್ನ ಅಜ್ಜನ ಮೊದಲನೇ ಹೆಂಡತಿ ಹಾಲಮ್ಮನಿಗೆ ಒಬ್ಬಳೇ ಮಗಳು ಅಂದರೆ 1 ನೇ ಪ್ರತಿವಾದಿ ಎಂದರೆ ಸರಿ. ಹಿರಿಯಮ್ಮನಿಗೆ ಒಬ್ಬ ಮಗ ಅಂದರೆ 2 ನೇ ಪ್ರತಿವಾದಿ. 2 ನೇ ಪ್ರತಿವಾದಿ ನನ್ನ ತಂದೆ. ನನ್ನ ಅಜ್ಜನ 3 ನೇ ಹೆಂಡತಿ ಬಸಮ್ಮನಿಗೆ 4 ಜನ ಮಕ್ಕಳು ಅಂದರೆ ವಾದಿ, ಪ್ರತಿವಾದಿ 4 ರಿಂದ 6. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ಅಜ್ಜನ ಜೀವಿತಕಾಲದಲ್ಲಿ ಅವರಿಗೆ ಕಣ್ಣು ಸರಿಯಾಗಿ ಕಾಣಿಸುತ್ತಿರಲಿಲ್ಲ ನಮ್ಮ ತಂದೆಯವರಿಗೆ ಸುಮಾರು 15 ವರ್ಷ ವಯಸ್ಸಿನಿಂದಲೂ ದುಡಿದು ವಾದಿ, ಪ್ರತಿವಾದಿ 1, 4 ಮತ್ತು 6 ರವರ ಮದುವೆಯನ್ನು ಮಾಡಿರುತ್ತಾರೆ ಮತ್ತು 5 ನೇ ಪ್ರತಿವಾದಿಯ ವಿದ್ಯಾಭ್ಯಾಸಕ್ಕಾಗಿ ಖರ್ಚು ವೆಚ್ಚಗಳನ್ನು ಭರಿಸಿದ್ದಾರೆ ಮತ್ತು ಅವರು ಈಗ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ ಮತ್ತು ಕುಟುಂಬದ ಸಾಲವನ್ನು ಸಹ ತೀರಿಸಿದ್ದಾರೆ ಮತ್ತು ನಮ್ಮ ಅಜ್ಜ ಜೀವಿತಕಾಲದಲ್ಲಿ 5 ಎಕರೆ ಜಮೀನನ್ನು ಮಾರಾಟ ಮಾಡುತ್ತೇನೆ ಎಂದು ಹೇಳಿದರು ಆದರೆ ನಮ್ಮ ತಂದೆಯವರು ಮಾರಾಟ ಮಾಡುವುದು ಬೇಡ ಎಂದು ಹೇಳಿ ಸಾಲವನ್ನು ಸಹ ದುಡಿದು ತೀರಿಸಿದ್ದಾರೆ ಎಂದು ನುಡಿಯುತ್ತಾರೆ. ನಮ್ಮ ಕುಟುಂಬದಲ್ಲಿ ಒಟ್ಟು 29 ಎಕರೆ ಜಮೀನು ಇರುತ್ತದೆ. ನಮ್ಮ ಅಜ್ಜನ 3 ಜನ ಹೆಂಡತಿಯ ಮಕ್ಕಳು ಸಹ ಒಟ್ಟು ಕುಟುಂಬದ ದುಡಿಮೆಯಲ್ಲಿ ಭಾಗವಹಿಸುತ್ತಿದ್ದರು ಎಂದರೆ ಸಾಕ್ಷಿಯು ಹೆಣ್ಣು ಮಕ್ಕಳು ಮದುವೆಯಾಗುವವರೆಗೂ ನಮ್ಮ ಮನೆಯಲ್ಲಿದ್ದರು ತದನಂತರ ಮದುವೆ ಮಾಡಿಕೊಂಡು ಗಂಡನ ಮನೆಗೆ

ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಗೆ ಆಸ್ತಿ ಕೊಡಬೇಕೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿ ಮತ್ತು ಪ್ರತಿವಾದಿಗಳು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸಾಕ್ಷಿಯು 2 ನೇ ಪ್ರತಿವಾದಿ ಮತ್ತು 5 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿದ್ದೇವೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ತನಗೆ ಸೇರಿದ ಆಸ್ತಿಯನ್ನು ನಮಗೆ ಗುತ್ತಿಗೆ ಆಧಾರದ ಮೇಲೆ ಸಾಗುವಳಿ ಮಾಡಲು ಕೊಟ್ಟಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಸೇರಿದ ಆಸ್ತಿಯನ್ನು ನಾವು ಗುತ್ತಿಗೆ ಆಧಾರದ ಮೇಲೆ ವ್ಯವಸಾಯ ಮಾಡುತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನಮ್ಮ ಅಜ್ಜನ ಮೊದಲನೇ ಹೆಂಡತಿಯ ಮಗಳಾಗಿದ್ದರಿಂದ ದಾವಾ ಆಸ್ತಿಯಲ್ಲಿ ಸಮಾನವಾದ ಭಾಗಾಂಶದ ಹಕ್ಕು ಮತ್ತು ಹಿತಾಸಕ್ತಿ ಇದೆ ಎಂದರೆ ಸರಿಯಲ್ಲ.  2 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿದರೆ ಸತ್ಯಾಂಶ ಹೊರಬರುತ್ತದೆ ಎಂಬ ಉದ್ದೇಶದಿಂದ ನಾನು ಮುಖ್ತಾರನಾಮೆಯನ್ನು ಪಡೆದುಕೊಂಡು ಬಂದು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ಶುದ್ಧ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

ವಾದಿಯ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.